ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಪೋಲೀಸ್ ಹಾಗೂ ಜನಸಂಖ್ಯೆಯ ಪ್ರಮಾಣ 1:752 ಇದೆ.

ಆ) ರಾಷ್ಟ್ರೀಯ ಪೊಲೀಸ್ ಆಯೋಗವು 1979 ರಲ್ಲಿ ಈ ಪ್ರಮಾಣವನ್ನು ಶಿಫಾರಸು ಮಾಡಿದೆ.

ಸರ್ಕಾರಿ ನೌಕರರುಗಳ ವರ್ಗಾವಣೆ ಮಾರ್ಗಸೂಚನೆ

2120 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರ್ಕಾರಿ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಸರ್ಕಾರವು ರೂಪಿಸಿರುವ ವರ್ಗಾವಣಾ ಮಾರ್ಗಸೂಚನೆಗಳು, ಎಲ್ಲಾ ಬೋರ್ಡುಗಳು ಮತ್ತು ಕಾರ್ಪೋರೇಷನ್ನುಗಳಿಗೆ ಅನ್ವಯವಾಗುವುದೇ?*

ಆ) *ಹಾಗಿದ್ದಲ್ಲಿ, ಬೋರ್ಡುಗಳು ಮತ್ತು ಕಾರ್ಪೋರೇಷನ್ನುಗಳು ಮಾರ್ಗಸೂಚನೆಗಳನ್ನು ಅನುಸರಿಸುತ್ತಿವೆಯೇ? ಇಲ್ಲದಿದ್ದಲ್ಲಿ ಈ ಬೋರ್ಡುಗಳನ್ನು ಮತ್ತು ಕಾರ್ಪೋರೇಷನ್ನುಗಳನ್ನು ಈ ಮಾರ್ಗಸೂಚನೆಗಳಡಿಯಲ್ಲಿ ಏಕೆ ತಂದಿರುವುದಿಲ್ಲ (ಕಾರಣಗಳನ್ನು ನಮೂದಿಸುವುದು)?*

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :

ಅ) ಇಲ್ಲ.

ಆ) ಬೋರ್ಡುಗಳು : ಕಾರ್ಪೋರೇಷನ್ನುಗಳು ಸ್ವಾಯತ್ತ ಸಂಸ್ಥೆಗಳು ಮತ್ತು ಅವುಗಳ ಅಗತ್ಯಕ್ಕೆ ತಕ್ಕಂತೆ, ಅವರದೇ ಆದ ವರ್ಗಾವಣಾ ನೀತಿಯನ್ನು ರೂಪಿಸಿಕೊಳ್ಳುವುದಕ್ಕೆ ಅವರಿಗೆ ಸ್ವಾತಂತ್ರ್ಯವಿರಬೇಕು.

1997-98ನೇ ಸಾಲಿನಲ್ಲಿ ಮಾಡಲಾದ ನೌಕರರ ವರ್ಗಾವಣೆ ಕುರಿತು

2121 - ಶ್ರೀ ಎಸ್. ಶಿವಣ್ಣ (ತುಮಕೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1997-98ನೇ ಸಾಲಿನ ವರ್ಗಾವಣೆ ನೀತಿಯನ್ನು ಅನುಸರಿಸಿ ಮಾಡಲಾದ ನೌಕರರ ವರ್ಗಾವಣೆಗಳು ಎಷ್ಟು? ಆ ಪೈಕಿ ಗ್ರೂಪ್ 'ಸಿ' ಮತ್ತು ಗ್ರೂಪ್ 'ಡಿ' ವರ್ಗಾವಣೆಗಳೆಷ್ಟು?*

ಆ) *ಕೋರಿಕೆ ವರ್ಗಾವಣೆ ಕೋರಿ ಬಂದ ಮನವಿಗಳು ಎಷ್ಟು? ಹಾಗೂ ಪರಿಗಣಿಸಿದವು ಎಷ್ಟು?*

ಇ) *ಪರಸ್ಪರ ವರ್ಗಾವಣೆ ಕೋರಿ ಬಂದ ಮನವಿಗಳು ಎಷ್ಟು? ಹಾಗೂ ಪರಿಗಣಿಸಿದವು ಎಷ್ಟು?*

ಈ) ದೂರಿನ ಮೇಲೆ ವರ್ಗಾವಣೆಯಾಗಿರುವ ಸಂಖ್ಯೆ ಎಷ್ಟು?

ಉ) ಪತಿಪತ್ನಿಯರ ಸಂಬಂಧದಲ್ಲಿ ವರ್ಗಾವಣೆ ಕೋರಿ ಬಂದ ಮನವಿಗಳು ಎಷ್ಟು? ಪರಿಗಣಿಸಿದವುಗಳು ಎಷ್ಟು?

ಊ) ಈ ವರ್ಗಾವಣೆಗಳಿಂದ ಸರ್ಕಾರಕ್ಕೆ ತಗಲಿರುವ ವೆಚ್ಚವೆಷ್ಟು?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :

ಅ) ಆ) ಇ) ಈ) ಉ) ಮತ್ತು ಊ) ವಿವಿಧ ಇಲಾಖೆಗಳಲ್ಲಿ ಮಾಡಲಾಗಿರುವ ವರ್ಗಾವಣೆಗಳ ವಿವರಗಳು ಕೇಂದ್ರೀಕೃತವಾಗಿ ಲಭ್ಯವಿರುವುದಿಲ್ಲ. ಸಂಬಂಧಿಸಿದ ಸಚಿವರಿಗೆ ಪ್ರಶ್ನೆ ಕೇಳಿ. ಅವರವರ ಇಲಾಖೆಗಳಿಗೆ ಸಂಬಂಧಿಸಿದಂತೆ ಮಾಹಿತಿ ಪಡೆಯಬಹುದು.

ಬೆಂಗಳೂರು ನಗರದಲ್ಲಿರುವ ಟ್ರಾಫಿಕ್ ವಾರ್ಡನ್

2124 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಸಂಚಾರಿ ಪೋಲೀಸ್ ಸಿಬ್ಬಂದಿಗಳ ಸಂಖ್ಯೆ ಎಷ್ಟು?

ಆ) ನಗರದಲ್ಲಿ ವಿಪರೀತವಾಗಿ ಏರುತ್ತಿರುವ ವಾಹನ ಬಾಹುಳ್ಯಕ್ಕೆ ಈ ಸಿಬ್ಬಂದಿಯ ಸಂಖ್ಯೆ ಸಮರ್ಪಕವಾಗಿದೆಯೇ?

ಇ) ನಗರದಲ್ಲಿ ಟ್ರಾಫಿಕ್ ವಾರ್ಡನ್‌ಗಳ ಸಂಖ್ಯೆ ಎಷ್ಟು?

ಈ) ಟ್ರಾಫಿಕ್ ವಾರ್ಡನ್‌ಗಳ ಕರ್ತವ್ಯವೇನು?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) 1543

ಆ) -ಇಲ್ಲ-

ಇ) 235

ಈ)

1) ರಸ್ತೆ ಸುರಕ್ಷತಾ ಮುಂಜಾಗ್ರತೆಗಳ ನಿಯಮಗಳನ್ನು ಪಾಲಿಸುವಂತೆ ಮತ್ತು ಅವರ ಜವಾಬ್ದಾರಿಗಳನ್ನು ತಿಳಿದುಕೊಳ್ಳಲು ಸಾರ್ವಜನಿಕರಲ್ಲಿ ತಿಳುವಳಿಕೆ ಮೂಡಿಸುವುದು.

2) ಪಾದಚಾರಿಗಳಿಗೆ ಮತ್ತು ವಾಹನ ಚಾಲಕರಿಗೆ ರಸ್ತೆ ಸುರಕ್ಷತಾ ಮತ್ತು ಸಂಚಾರ ತಿಳುವಳಿಕೆ ಬಗ್ಗೆ ಸಂಚಾರ ಪೋಲೀಸರೊಂದಿಗೆ ಶಿಬಿರಗಳನ್ನು ಏರ್ಪಡಿಸುವುದು.